ಕೆಲವು ಹಳ್ಳಿಗಳಲ್ಲಿ ಈಗಲೂ ಅತಿಥಿಗಳು ಯಾರಾದರೂ ಆಗಮಿಸುತ್ತಿದ್ದಂತೆ, ಕಬ್ಬಿಣದ ಹೆಂಚನ್ನು ಒಲೆಯ ಮೇಲಿರಿಸಿ, ಸಿಪ್ಪೆ ಶೇಂಗಾ ಹುರಿದು, ಹಕ್ಕಿಗಳಿಗೆ ಕಾಳು ಎಸೆಯುವಂತೆ, ಬಂದವರ ಮುಂದೆ ನೆಲಕ್ಕೆ ಸುರಿದು, ಒಂದು ತುಂಡು ಬೆಲ್ಲ ಇಡುವುದಿದೆ. ಹಕ್ಕಿಗಳು ಹೆಕ್ಕಿ ತಿಂದಂತೆ, ಸಿಪ್ಪೆ ಶೇಂಗಾವನ್ನು ನೆಲಕ್ಕೆ ಕುಕ್ಕಿ ಕುಕ್ಕಿ ಕಾಳು ಬಿಡಿಸಿಕೊಂಡು ತಿನ್ನುವುದಾಗುತ್ತದೆ.

ಕುಕ್ಕಿ ತಿನ್ನುವುದೂ ಒಂದು ಕಲೆ. ಸಿಪ್ಪೆ ಶೇಂಗಾದ ಚೂಪಾದ ನಗುವ ಬಿಗಿ ತುಟಿಯನ್ನು, ಬೆರಳುಗಳನ್ನು ಉಪಯೋಗಿಸಿ ಎರಡೂ ಬದಿಯಿಂದ ಗಟ್ಟಿಯಾಗಿ ಅಮುಕಿಯೋ, ನೆಲಕ್ಕೆ ಕುಕ್ಕಿಯೋ ಅರಳಿಸಿದಾಗಲೇ, ಒಳಗಿರುವ ಶೇಂಗಾ ಕಾಳುಗಳು ಹಲ್ಲುಗಳಂತೆ ಕಿಲಕಿಲ ನಗುತ್ತ ಹೊರಗಿಣುಕುತ್ತವೆ. ಸಂಸಾರವಂದಿಗ ಕಾಯಿಗಳು ಒಂದೆರಡು ಏಟಿಗೆ ಸುಲಭವಾಗಿ ಬಾಯಿಬಿಡುತ್ತವೆ. ಆದರೆ ಆಜನ್ಮ ಬ್ರಹ್ಮಚಾರಿಯಂತೆ ಇರುವ ಒಂಟಿಕಾಳುಗಳು ಮಾತ್ರ 'ಒಂಟಿಕಾಳು ಎಂಟು ಹೊಡೆತ' ಎನ್ನುವಂತೆ ಚೆನ್ನಾಗಿ ಕುಕ್ಕಿಸಿಕೊಂಡು ಮತ್ತೂ ಹಟ ಹಿಡಿದರೆ ಕಲ್ಲಿನಿಂದ ಜಜ್ಜಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚು.



ಹಿಂದೆಲ್ಲ ಸುಗ್ಗಿಯಲ್ಲಿ ಶೇಂಗಾ ಸುಲಿಯಲು ಬರುವ ಕೂಲಿಯಾಳುಗಳು, ಸುಲಿಯುತ್ತಲೇ ಮಾಲೀಕರ ಕಣ್ತಪ್ಪಿಸಿ ತಮ್ಮ ಹಸಿದ ಹೊಟ್ಟೆಗೂ ತುಂಬಿಕೊಳ್ಳುವ ಸಂಭವ ಹೆಚ್ಚಿರುತ್ತಿದ್ದುದರಿಂದ ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿದ್ದರು. ಈಗ ಅದಕ್ಕೆಲ್ಲ ಯಂತ್ರಗಳಿರುವುದರಿಂದ ತಲೆಬಿಸಿ ತಪ್ಪಿದೆ. ಹಳ್ಳಿಗಳ ಕಡೆ ಅಂಕುಡೊಂಕು ಮೂಗಿನವರನ್ನು ನೆಟ್ಟೆಕಾಯಿ ಮೂಗು ಎಂದು ಜರಿಯುವುದೂ ಇದೆ. ಸಂಕ್ರಾಂತಿಯ ದಿನಗಳಲ್ಲಿ ತಯಾರಿಸುವ ಎಳ್ಳು, ಬೆಲ್ಲದ ಸಿಹಿಯ ಜೊತೆ ಸೇರಿಸುವ ನೆಲಗಡಲೆಯನ್ನು ಚೆನ್ನಾಗಿ ಹುರಿದು, ಸಿಪ್ಪೆ ತೆಗೆದು, ಹೋಳು ಮಾಡಿ, ಕಾಳಿನ ಕೆಳ ತುದಿಭಾಗದಲ್ಲಿರುವ ಪುಟ್ಟ ಮೂಗನ್ನು ಮುರಿದು ತೆಗೆಯುವುದಿದೆ.

ಶೇಂಗಾದ ಒಂದು ವಿಶೇಷತೆಯೆಂದರೆ, ತಿನ್ನುವಾಗ ಇದರ ಓಪನಿಂಗ್ ಸೆರೆಮನಿ ಮಾತ್ರ ಗೊತ್ತಿರುತ್ತದೆ, ಕ್ಲೋಸಿಂಗ್ ಸೆರೆಮನಿ ಮಾತ್ರ ಸ್ಟಾಕ್ ಖಾಲಿಯಾದಾಗಲೇ. ಅರ್ಧಕ್ಕೆ ಎದ್ದ ಉದಾಹರಣೆಗಳೇ ಕಡಿಮೆ. ಎಷ್ಟು ತಿಂದರೂ ತಿನ್ನಬೇಕೆನಿಸುವ, ಹೊಟ್ಟೆ ತುಂಬಿದ್ದರೂ ಸರಾಗವಾಗಿ ಇಳಿಯುವ ಇದರ ರುಚಿಗೆ ಮನಸೋಲದವರಿಲ್ಲ.

ಬಸ್ಸು, ರೈಲು, ಸಿನಿಮಾ, ಪಾರ್ಕು, ಹೀಗೆ ಎಲ್ಲಾದರೂ ಹೋದಾಗ ಸಮಯಕ್ಕಾಗುವ, ಸಮಯವನ್ನು ಕೊಲ್ಲುವ 'ಟೈಮ್ ಪಾಸ್ ಕಡಲೆಕಾಯಿ' ಎಲ್ಲರಿಗೂ ಪ್ರಿಯ. ಬಿದಿರಿನ ಬುಟ್ಟಿಗಳಲ್ಲಿ ಕಡಲೆಕಾಯಿ ಇಟ್ಟುಕೊಂಡು, ಜೊತೆಗೆ ಹಣಕ್ಕೆ ತಕ್ಕಂತೆ ಅಗಲ, ಉದ್ದ ಹೆಚ್ಚಾಗುವ ಕಾಗದದ ಸುರುಳಿ ಪೊಟ್ಟಣದೊಂದಿಗೆ ಅಥವಾ ಶೇಂಗಾ ಪ್ಯಾಕೆಟ್ಟಿನೊಂದಿಗೆ 'ಶೆಂಗಾರೀ ಶೇಂಗ ಶೇಂಗಾ...' ಎಂದು ವಿಚಿತ್ರ, ವಿಶಿಷ್ಟ ಧ್ವನಿಯೊಂದಿಗೆ ಎದುರಾಗುವ ಶೇಂಗಾವಾಲಾಗಳು ಎಲ್ಲರ ಗಮನವನ್ನು ಸೆಳೆಯುತ್ತಾರೆ. ಕೊಂಡವರು ಒಂದೊಂದೇ ಶೇಂಗಾಕಾಳನ್ನು ತಮ್ಮ ಬಾಯಿಯೆಂಬ ಬಾಸ್ಕೆಟ್‌ಗೆ ಗುಡ್ ಥ್ರೋ ಎಸೆದುಕೊಂಡು ಜಗಿಯುತ್ತ, ಜೊತೆಗಾರರೊಂದಿಗೆ ಸಿಕ್ಕ ಸಿಕ್ಕ ವಿಷಯಗಳನ್ನೂ ಅಗಿಯುವುದು ಸಾಮಾನ್ಯ. ನಂತರ ಎಲ್ಲೆಲ್ಲೂ ಶೇಂಗಾ ಸಿಪ್ಪೆಯ ಕಸದ್ದೇ ಕಾರುಬಾರು.

ಮಂಗನಿಗೂ ಶೇಂಗಾಗೂ ಬಿಡಿಸಲಾರದ ನಂಟು. ಹಾಗಾಗಿಯೇ ಶೇಂಗಾಕ್ಕೆ 'ಮಂಕಿನಟ್' ಎನ್ನುವ ಹೆಸರು ಬಂದಿರಬಹುದೇನೋ. ಮೀನು ಹಿಡಿಯಲು ಎರೆಹುಳುವನ್ನು ಗಾಳಕ್ಕೆ ಕಟ್ಟುವಂತೆ, ಶೇಂಗಾನೇ ಮಂಗ್ಯಾನ ವೀಕ್ನೆಸ್ಸು ಎನ್ನುವುದು ಜಗಜ್ಜಾಹೀರಾಗಿರುವುದರಿಂದ, ಸಣ್ಣ ಬಾಯಿಯಿರುವ ಶೀಷೆಗೆ ಶೇಂಗಾಕಾಳನ್ನು ಹಾಕಿಡುತ್ತಾರಂತೆ. ಖುಷಿಯಿಂದ ಅದರ ಆಸೆಗೆ ಶೀಷೆಯೊಳಗೆ ಕೈತೂರಿಸಿದ ಮಂಗ, ಮುಷ್ಟಿ ತುಂಬ ಕಾಳುಗಳನ್ನು ಗಟ್ಟಿಯಾಗಿ ಹಿಡಿದು ಹೊರಗೆಳೆದುಕೊಳ್ಳುವ ವಿಫಲ ಪ್ರಯತ್ನದಲ್ಲಿರುವಾಗ, ಅವುಗಳನ್ನು ಸುಲಭವಾಗಿ ಹಿಡಿಯುತ್ತಾರಂತೆ. 'ಇಂಗು ತಿಂದ ಮಂಗನಂತಾಡಬೇಡ' ಎನ್ನುವುದರ ಜೊತೆಗೆ 'ಶೇಂಗಾ ಹಿಡಿದ ಮಂಗನಾಗಬೇಡ' ಎನ್ನುವ ಸಾಲನ್ನೂ ಸೇರಿಸಬಹುದು. ಈ ನೆಲಗಡಲೆ ಭೂಮಿಯ ಒಳಭಾಗದಲ್ಲಿ ಬೆಳೆಯುವುದರಿಂದ ಮಂಗಗಳ ಪಾಲಾಗದೆ, ಮನುಷ್ಯನಿಗೆ ಎಟಕುವಂತಾಗಿರಬಹುದು.



ಎಣ್ಣೆ ಕಾಳುಗಳು ಹತ್ತಾರು ಇರಬಹುದು. ಆದರೆ ನಿಜವಾಗಿಯೂ ಎಣ್ಣೆಯ ಜೊತೆಗೆ ನಿಕಟ ಸಂಬಂಧ ಹೊಂದಿರುವ ಕಾಳು ಎಂದರೆ ಶೇಂಗಾ ಮಾತ್ರ. ಶೇಂಗಾ ಕಾಳನ್ನು ಗಾಣಕ್ಕೆ ಸುರುವಿ, ತಿರುವಿ ಎಣ್ಣೆ ತೆಗೆದು ಅಡುಗೆಗೋ, ದೀಪಕ್ಕೋ ಉಪಯೋಗಿಸುವುದು ಒಂದು ರೀತಿಯಾದರೆ, ಮದಿರಾಪ್ರಿಯರು ಎಣ್ಣೆ ಹಾಕುವಾಗ, ಹಿಟ್ಟು ಹಚ್ಚಿದ, ಹುರಿದ ಅಥವಾ ಕರಿದ ಶೇಂಗಾಕಾಳನ್ನು ನಡುನಡುವೆ ಬಾಯಿಗೆ ಹಾಕಿ ತಿರುವುವುದು ಮತ್ತೊಂದು ರೀತಿ. ಹಾಗಾಗಿ 'ಶೇಂಗಾಎಣ್ಣೆ' ಎನ್ನುವ ಪದ ಜೋಡಿಪದಕ್ಕೊಂದು ಅರ್ಥ, ಬಿಡಿಪದಕ್ಕೆ ಮತ್ತೊಂದರ್ಥ ನೀಡುತ್ತದೆ. ಕೇವಲ ಎಣ್ಣೆಯಲ್ಲದೆ ಪೀನಟ್ ಬಟರ್ ರೂಪದಲ್ಲಿ ಮೋಡಿ ಮಾಡಿ ಬೆಣ್ಣೆಗೂ ಸೆಡ್ಡು ಹೊಡೆದಿದೆ ಎನ್ನಬಹುದು.

ಸೂಜಿದಾರ ಹೊಲಿಯುವವರ ಬಲಕ್ಕಿರಬೇಡ, ನೆಗಡಿಯಾದವರ ಎಡಕ್ಕೆ ಕೂರಬೇಡ ಎನ್ನುವ ನಾಣ್ಣುಡಿಯಂತೆ ಹೊಟ್ಟೆಭರ್ತಿ ಶೇಂಗಾ ಭಕ್ಷಿಸಿದವರ ಜೊತೆಗಿರಬೇಡ ಎನ್ನುವ ಸಾಲೂ ಒಪ್ಪುತ್ತದೆ. ಶೇಂಗಾಬೀಜಗಳು ಹೊಟ್ಟೆಯೊಳಗೆ ಸೇರುತ್ತಿದ್ದಂತೆ, ಸದನದಲ್ಲಿ ರಾಜಕಾರಣಿಗಳು ಸೇರುತ್ತಿದ್ದಂತೆ ವಾತಾವರಣವನ್ನೆಲ್ಲ ಗಬ್ಬೆಬ್ಬಿಸಿ ಗದ್ದಲವೆಬ್ಬಿಸಿದಂತೆ, ಬಗೆಬಗೆಯ ಅನಿಲಗಳನ್ನು ಸೃಷ್ಟಿಮಾಡಿ, ವಿವಿಧ ಶಬ್ದಾಲಂಕಾರಗಳ ಮೂಲಕ ಹೊರಹಾಕುವುದು ಹೆಚ್ಚು. ಅಕ್ಕಪಕ್ಕದಲ್ಲಿರುವವರಿಗೆ ಸೌಂಡ್ ಪೊಲ್ಯೂಷನ್ನಿನ ಜೊತೆಗೆ, ಹಿಟ್ಲರ್ ಶತ್ರುಗಳನ್ನು ಕೂಡಿಹಾಕುತ್ತಿದ್ದ ಗ್ಯಾಸ್‌ಚೇಂಬರ್‌ನಲ್ಲಿ ವಿಲಿವಿಲಿ ಒದ್ದಾಡುವಂತಾಗುವ ಅನುಭವ ಆಗಾಗ ಆಗುತ್ತಿರುತ್ತದೆ. ರಾಜಕೀಯದಲ್ಲಿ ಮಸಾಲೆ ಕಡಲೆಕಾಯಿಯೂ ಸೇರಿಕೊಂಡಿದೆ. ಏಕಪತ್ನೀವ್ರತಸ್ಥರಿದ್ದಂತೆ ಇದು ಏಕಪಕ್ಷವ್ರತಸ್ಥ. ತಲೆ ಒಡೆಸಿಕೊಂಡು ಹೋಳಾಗಿ ಮಸಾಲಯುಕ್ತವಾಗಿ, ತಿನ್ನುವಾಗ ಮಸಾಲೆಯೆಲ್ಲ 'ಕೈ'ಗೇ ಅಂಟಿಕೊಳ್ಳುವುದರಿಂದ ಕಾಂಗ್ರೆಸ್ ಕಡಲೆಕಾಯಿಯೆಂದು ಪ್ರಸಿದ್ಧಿ ಪಡೆದಿರಬಹುದು.

ಕಾಲ ಬದಲಾದಂತೆ ಮನುಷ್ಯನ ರುಚಿ ಹಾಗೂ ಅಭಿರುಚಿಗಳು ಬದಲಾಗುತ್ತಲೇ ಇರುತ್ತವೆ. ಆದರೆ ಕಡಲೆ ತಿನ್ನಲು ಮಾತ್ರ ಬಹುತೇಕ ಮನಗಳು ಸಮಯಾಸಮಯ ನೋಡದೆ ಹಂಬಲಿಸುತ್ತಿರುತ್ತವೆ. ಅಂದು ಇಂದು, ಮುಂದೂ ಸಹ ರುಚಿಯಲ್ಲಿ ಅಗ್ರಸ್ಥಾನವನ್ನು ಸದಾ ಕಾಯ್ದುಕೊಳ್ಳುತ್ತದೆ ಎಂದು ಕರಾರುವಕ್ಕಾಗಿ ಹೇಳಬಹುದು.

ಪ್ರತಿಕ್ರಿಯಿಸಿ: feedback@sudha.co.in